757 (1116) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) –ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಶಿಗ್ಗಾಂವ–ಸವಣೂರ ತಾಲ್ಲೂಕುಗಳಲ್ಲಿ ಈವರೆಗೆ ವಿತರಣೆ ಮಾಡಿರುವ ಬಿಪಿಎಲ್ ಪಡಿತರ ಚೀಟಿಗಳೆಷ್ಟು, ಹಂಚಿಕೆ ಮಾಡಬೇಕಾಗಿರುವ ಪಡಿತರ ಚೀಟಿಗಳೆಷ್ಟು (ಹೋಬಳಿವಾರು ವಿವರ ಒದಗಿಸುವುದು),

(ಆ) ಈ ತಾಲ್ಲೂಕುಗಳಲ್ಲಿ ಈವರೆಗೂ ಬಿಪಿಎಲ್ ಪಡಿತರ ಚೀಟಿ ಅರ್ಹ ಫಲಾನುಭವಿಗಳಿಗೆ ಸರಿಯಾಗಿ ವಿತರಣೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ,

(ಇ) ಹಾಗಿದ್ದಲ್ಲಿ, ಈ ಅರ್ಹ ಫಲಾನುಭವಿಗಳಿಗೆ ಪಡಿತರ ಚೀಟಿ ವಿತರಿಸಲು ಸರ್ಕಾರ ಜರೂರಾಗಿ ಕ್ರಮ ಕೈಗೊಳ್ಳುವುದು ?

ಶ್ರೀ ಗೋವಿಂದ ಎಂ ಕಾರ್ಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) –

(ಅ) ಶಿಗ್ಗಾಂವ–ಸವಣೂರು ತಾಲ್ಲೂಕುಗಳಲ್ಲಿ ಈವರೆಗೆ ವಿತರಣೆ ಮಾಡಿರುವ ಬಿಪಿಎಲ್ ಪಡಿತರ ಚೀಟಿಗಳ ವಿವರ ಈ ಕೆಳಕಂಡತಿರುತ್ತದೆ

ಶಿಗ್ಗಾಂವ–ಸವಣೂರು

	ವಿತರಣೆ ಮಾಡಿದ್ದು	ಹಂಚಿಕೆ ಮಾಡಬೇಕಾದ್ದು
ಶಿಗ್ಗಾಂವ ಹೋಬಳಿ	8913	–
ಬಂಕಾಪುರ ಹೋಬಳಿ	6795	–
ದಾಂಡಸಿ ಹೋಬಳಿ	6042	–
ಒಟ್ಟು	21750	–

ಸವಣೂರು ತಾಲ್ಲೂಕು

	ವಿತರಣೆ ಮಾಡಿದ್ದು	ಹಂಚಿಕೆ ಮಾಡಬೇಕಾದ್ದು
ಶಿಗ್ಗಾಂವ ಹೋಬಳಿ	6957	–
ಬಂಕಾಪುರ ಹೋಬಳಿ	11141	–
ಒಟ್ಟು	18108	–

(ಆ) ಬಂದಿದೆ

(ಇ) ಈಗಾಗಲೇ ಶಿಗ್ಗಾಂವ ಹಾಗೂ ಸವಣೂರು ತಾಲ್ಲೂಕಿನಲ್ಲಿ ತಾತ್ಕಾಲಿಕ ಪಡಿತರ ಕೂಪನ್ ವಿತರಣೆಯಲ್ಲಿ ಎಪಿಎಲ್ ಪಡಿತರ ಕೂಪನ್‌ಗಳನ್ನು ಪಡೆದಿದ್ದು ಬಿಪಿಎಲ್ ಪಡಿತರ ಕೂಪನ್ ಕೋರಿ ಸಲ್ಲಿಸಿರುವ ಅಹವಾಲುಗಳನ್ನು ಪರಿಶೀಲಿಸಿದ್ದು ಅರ್ಹತೆಗನುಗುಣವಾಗಿ 6731 ಬಿಪಿಎಲ್ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿದೆ ಹಾಗೂ ಜಿಲ್ಲಾಧಿಕಾರಿಗಳಿಗೆ ಎಲ್ಲಾ ಅರ್ಹ ಫಲಾನುಭವಿಗಳನ್ನು ಸೇರ್ಪಡೆ ಮಾಡಲು ನಿರ್ದೇಶನ ನೀಡಲಾಗಿರುತ್ತದೆ

759 (1118) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) –ಸಹಕಾರ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಶಿಗ್ಗಾಂವ–ಸವಣೂರ ತಾಲ್ಲೂಕುಗಳಲ್ಲಿ ಹೆಚ್ಚಿನ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕುಗಳು ಅವಶ್ಯಕತೆ ಇರುವುದು ಸರ್ಕಾರದ ಗಮನದಲ್ಲಿದೆಯೇ ?

(ಆ) ಹಾಗಿದ್ದಲ್ಲಿ, ಶಿಗ್ಗಾಂವ ತಾಲ್ಲೂಕು ಹೊಸೂರ, ಗಂಜೀಗಟ್ಟಿ ವನಹಳ್ಳಿ, ಚಿಕ್ಕಮಲ್ಲೂರ, ಬಾಡ ಗ್ರಾಮಗಳಿಗೆ ಹಾಗೂ ಸವಣೂರ ತಾಲ್ಲೂಕು ಮಂಟಗಣಿ, ಡಂಬರಮತ್ತೂರ, ಮನ್ನಂಗಿ, ಚಳ್ಳಾಳ, ಕುರಬರ ಮಲ್ಲೂರ ಗ್ರಾಮಗಳಲ್ಲಿ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕುಗಳನ್ನು ಪ್ರಾರಂಭಿಸಿ ರೈತರಿಗೆ ಅನುಕೂಲ ಮಾಡಲು ಸರಕಾರ ಕ್ರಮ ಕೈಗೊಳ್ಳುವುದೇ ?

(ಇ) ಧಾರವಾಡ ಕೆ ಸಿ ಸಿ ಬ್ಯಾಂಕ್ ಪುನಶ್ಚೇತನಗೊಳಿಸಲು ಸರ್ಕಾರದ ಕ್ರಮವೇನು ?

(ಈ) ವ್ಯವಸಾಯ ಸೇವಾ ಸಹಕಾರಿ ಬ್ಯಾಂಕುಗಳಿಂದ ರೈತರಿಗೆ ಸಾಲ ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು) –

(ಅ) ಪ್ರಸ್ತುತ ಶಿಗ್ಗಾಂವ ತಾಲ್ಲೂಕಿನಲ್ಲಿ 28 ಹಾಗೂ ಸವಣೂರು ತಾಲ್ಲೂಕಿನಲ್ಲಿ 21 ಪಿಕೆಪಿಎಸ್/ವಿಎಸ್‌ಎಸ್‌ಎಸ್ ಬ್ಯಾಂಕುಗಳು ಇರುತ್ತವೆ ಹಾಗೂ ಈಗಿನ ಪರಿಸ್ಥಿತಿಯಲ್ಲಿ ಹೊಸದಾಗಿ ವ್ಯವಸಾಯ ಸೇವಾ ಸಹಕಾರಿ ಸಂಘ/ ಬ್ಯಾಂಕುಗಳನ್ನು ರಚಿಸುವ ಅವಶ್ಯಕತೆ ಕಂಡು ಬರುವುದಿಲ್ಲ

(ಆ) ಈ ಗ್ರಾಮಗಳು ಕೃಷಿ ಪತ್ತಿನ ಸಹಕಾರ ಸಂಘವನ್ನು ನೋಂದಣಿ ಮಾಡಲು ನಬಾರ್ಡ್ ವಿಧಿಸಿರುವ ಮಾರ್ಗಸೂಚಿಗಳ ಪ್ರಕಾರ ಅರ್ಹತೆಯನ್ನು